ಶ್ರೀ ವಾಟಾಳ್ ನಾಗರಾಜ್: ಯಾರ್ಯಾರು ತೆಗೆದುಕೊಳ್ಳುತ್ತಾರೆ ಎಂದು ತಮಗೆ ಗೊತ್ತಿರುತ್ತದೆ ಸ್ವಾಮಿ.

ಮಾನ್ಯ ಸದಸ್ಯರು: ಬೆಳಿಗ್ಗೆ ತೆಗೆದುಕೊಂಡರೆ ಅದು ನೀರಾ. ಮಧ್ಯಾಹ್ನ ತೆಗೆದುಕೊಂಡರೆ ಅದು ಸೇಂದಿ ಆಗುತ್ತದೆ.

(ಆ) ಈಚಲು ಮರದಿಂದ ಸೇಂದಿ ಇಳಿಸುವ ಕಾರ್ಮಿಕರ ವಿಷಯ:

+ ಶ್ರೀ ಸುಭಾಶ್ ಆರ್.ಗುತ್ತೇದಾರ್ (ಆಳಂದ): ಮಾನ್ಯ ಅಧ್ಯಕ್ಷರೇ, ನಾನು ಮೊದಲು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರ ಸಿಕ್ಕಿಲ್ಲ. ಆದ್ದರಿಂದ ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಈಗ ನಮ್ಮ ಸರ್ಕಾರ ನವೆಂಬರ್ ಒಂದನೇ ತಾರೀಖಿನಿಂದ ಒಂದು ಹೊಸ ಪದ್ಧತಿಯನ್ನು ಎಕ್ಸೈಸ್‌ನಲ್ಲಿ ತರುತ್ತಿದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ರೀತಿಯಿಂದ ಸೇಂದಿ ಕಾರ್ಮಿಕರಿಗೆ ಸಹಕಾರ ಸಂಘಗಳಿಂದ ಏನು ಮಾರಾಟ ಮಾಡಲು ಕೊಡುತ್ತಿದ್ದಾರೆ, ಅದೇ ತರಹ ನಮ್ಮ ಉತ್ತರ ಕರ್ನಾಟಕಕ್ಕೆ ಕೊಡುತ್ತೀರಾ ಎಂದು ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬಯಸುತ್ತಿದ್ದೇನೆ. ಏಕೆಂದರೆ ನಮ್ಮ ಕಡೆ ಬಹಳಷ್ಟು ಜನ ಕಾರ್ಮಿಕರು ಇದ್ದಾರೆ. ಇವರಿಗೆ ಒಂದು ನೆಲೆಯೇ ಇಲ್ಲ. ಇಂತಹ ಊರು ಎಂದು ಇಲ್ಲ, ನೆಲೆ ಇಲ್ಲ. ಎಲ್ಲಿ ಮರಗಳು ಇರುತ್ತವೆ, ಅಲ್ಲಿ ಕೆತ್ತಿಕೊಂಡು ಹೋಗುತ್ತಾರೆ. ಅಲ್ಲಿ ಮುಗಿದರೆ ಮತ್ತೆ ಮುಂದೆ ಹೋಗುತ್ತಾರೆ. ಬಹಳಷ್ಟು ಜನರು ಮುಂಬಯಿ, ಪುನಃ ಮಹಾರಾಷ್ಟ್ರಕ್ಕೆ ಹೋಗಿದ್ದಾರೆ. ಅದಕ್ಕೋಸ್ಕರ ಈ ಸೇಂದಿ ಇಳಿಸುವವರು ಮತ್ತು ಸಪ್ಲೈ ಮಾಡುವವರು ಮತ್ತು ಮಾರುವವರು ಬಹಳಷ್ಟು ಕಾರ್ಮಿಕರು ನಿರ್ಗತಿಕರಾಗಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಲಕ್ಷ್ಯ ಕೊಟ್ಟು ಏಕೆಂದರೆ ಮೊದಲು ವೈಜನಾಥ ಪಾಟೀಲರು, ದೇವೇಗೌಡರೂ ಕೂಡ ಬಂದು ಅಲ್ಲಿ ಒಂದು ಸಂಘ ಕರೆದು ಎಲ್ಲಾ ಜನರಿಗೆ ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಕೇಳುತ್ತೇನೆ. ನಮ್ಮ ಉತ್ತರ ಕರ್ನಾಟಕದವರಿಗೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಸಭಾಪತಿಯವರು....

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೇ....

ಅಧ್ಯಕ್ಷರು: ನೀವು ಸೇಂದಿಗೆ ನೋಟೀಸ್ ಕೊಟ್ಟಿಲ್ಲ, ಕೊಡದಿದ್ದರೂ ಮಾತನಾಡಬೇಕಂತೆ ನೀವೇ ಹೇಳಿ ಏನು ಮಾಡುವುದು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸುಭಾಶ್‌ರವರಿಗೆ ಹೇಳುವುದು ಏನೆಂದರೆ, ದಕ್ಷಿಣಕನ್ನಡದಲ್ಲಿ ಒಂದು ವಿಶೇಷ ಪರಿಸ್ಥಿತಿ

ಇದೆ. ಇದನ್ನು ನಾನು ಸ್ವತಃ ನೋಡಿದ್ದೇನೆ, ಹಾಗೂ ಮೂರ್ತೆದಾರರ ಸಂಘದ ಅರ್ಜಿಯನ್ನು ಕೇಳಿದ್ದೇನೆ. ಅಲ್ಲಿ ಸೇಂದಿ ಇಳಿಸುವುದಕ್ಕೆ ಬೇಕಾಗತಕ್ಕಂಥ ಮರಗಳಿವೆ. ಇದರಲ್ಲಿ ತೆಂಗಿನ ಮರವಾಗಿರಬಹುದು ಅಥವಾ ಈಚಲು ಮರವಾಗಿರಬಹುದು. ಈ ಹಿಂದೆ ನಾವು ಈ ಸೇಂದಿಯನ್ನು ಏಕೆ ಬ್ಯಾನ್ ಮಾಡಿದ್ದೇವೆಂದರೆ, ಮಾನ್ಯ ಸುಭಾಶ್‌ರವರು ಗಮನಿಸಬೇಕು. ಅಲ್ಲಿ ಒಂದು ದೊಡ್ಡದು ಸಂಪು ರೀತಿಯಲ್ಲಿ ಹೊಂಡ ತೆಗೆದು, ಅವರ ಹತ್ತಿರ ಸ್ಟಾಕ್ ಇರುವ ಬಿಳಿಪುಡಿಯನ್ನು ಹಾಕಿ ಕೋರೆಲಾ ಹೈಡ್ರೇಟ್ ಎನ್ನುವ ವಿಷ, ಚಾಕ್ ಪೌಡರ್, ನೀರು ಈ ಮೂರು ಸೇರಿಸಿ ಹೆಂಡ ಎಂದು ಮಾಡಿ ಮಾರುತ್ತಿದ್ದರು. ಇದು ಜನರ ಆರೋಗ್ಯಕ್ಕೆ ಮಾರಕ ಅಷ್ಟೇ ಅಲ್ಲದೇ ವಿಷಪೂರಿತವಾಗಿದೆ. ಇದನ್ನೆಲ್ಲಾ ನಾವು ನೋಡಿ ಬಹಳ ಹಿಂದೆ ಅಂದರೆ ಸುಮಾರು 4-5 ವರ್ಷಗಳ ಹಿಂದೆ ನಮ್ಮ ಸರ್ಕಾರವಿದ್ದಾಗ ನಾವು ಈ ಸೇಂದಿಯನ್ನು ಎಲ್ಲಾ ಕಡೆ ನಿಷಿದ್ಧ ಮಾಡಿದ್ದೇವೆ. ಈ ಒಂದು ಕಾರಣಕೋಸ್ಕರ ಮಂಗಳೂರಿಗೆ ಮಾತ್ರ ಏಕೆಂದರೆ ಅಲ್ಲಿ ಸೇಂದಿ ಇಳಿಸುವ ಜಾತಿಯವರು ಇರಬಹುದು, ಉದಾಹರಣೆಗೆ ನಮ್ಮಲ್ಲಿ ಈಡಿಗರು ಎಂದು ಕರೆಯುತ್ತಾರೆ, ಕೇರಳದಲ್ಲಿ ಕೂಡ ಅವರನ್ನು ಮತ್ತೊಂದು ಹೆಸರಿನಲ್ಲಿ ಕರೆಯುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಈಡಿಗರು ಹೆಚ್ಚಾಗಿರುವುದನ್ನು ಕಾಣುತ್ತೇವೆ. ಇದೇ ರೀತಿಯಲ್ಲಿ ಕೊಡಗಿನಲ್ಲೂ ಇದ್ದಾರೆ, ಆದರೂ ಅಲ್ಲಿ ನಾವು ಈ ಸೇಂದಿಗೆ ಅವಕಾಶ ಕೊಟ್ಟಿಲ್ಲ. ಏಕೆಂದರೆ ಮರ ಇಲ್ಲದಿದ್ದ ಮೇಲೆ ಹೇಗೆ ಸೇಂದಿ ಇಳಿಸುತ್ತಾರೆ? ಸ್ವಲ್ಪ ಪೂರ್ತಿ ವಿಷಯ ಹೇಳುತ್ತೇನೆ ಕೇಳಿ ಎಲ್ಲಿ ಸೇಂದಿ ಇಳಿಸುವುದಕ್ಕೆ ಮರಗಳಿಲ್ಲವೋ ಅಂತಹ ಕಡೆಗಳಲ್ಲಿ ಸೇಂದಿ ಇಳಿಸಬಾರದು, ಏಕೆಂದರೆ ಈ ದುಷ್ಪದ್ಧತಿಗೆ ಕೈ ಹಾಕುತ್ತಾರೆಂದು ನಾವು ಅವಕಾಶ ಕೊಟ್ಟಿಲ್ಲ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ವಿಶೇಷ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅವರಿಗೆ ಅವಕಾಶ ಕೊಟ್ಟಿದ್ದೇವೆ. ಬೇರೆ ಕಡೆ ಇದು ಸಾಧ್ಯವಾಗುವುದಿಲ್ಲ. ಜನರಿಗೆ ಅಪಾಯ.

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರೆ, ಅಲ್ಲಿ ಏನಾಗಿದೆ ಈ ಸೇಂದಿಯನ್ನು ತೆಗೆದುಹಾಕುವ ಸಂದರ್ಭದಲ್ಲಿ ತಾವು ಹೇಳಿರುವುದು ನಿಜ. ಇದಕ್ಕೆ ಯಾವುದೂ ಭಿನ್ನಾಭಿಪ್ರಾಯ ಇಲ್ಲ. ಈಗ ಸರ್ಕಾರದ ವರದಿ ಪ್ರಕಾರ ಅವರು ಹೇಳುವುದು.. ಇಡೀ ರಾಜ್ಯದಲ್ಲಿ ಎಂದು ಹೇಳುವುದಿಲ್ಲ. ಯಾವ ತಾಲ್ಲೂಕುಗಳಲ್ಲಿ ನಮ್ಮ ನಿರೀಕ್ಷೆಗಿಂತ ಹೆಚ್ಚಿನ ಸೇಂದಿ ಮರಗಳಿವೆ, ಅಂತಹ ಕಡೆಗಳಲ್ಲಿ ಈ ಸೊಸೈಟಿ ಮೂಲಕ ತೆಗೆದು ಮಾರುವುದಕ್ಕೆ ಅವಕಾಶ ಮಾಡಿ ಕೊಡಿ. ಏಕೆಂದರೆ ಈ ಸೇಂದಿ ಕುಯ್ಯುವವರು ಯಾರು ಭೂಮಿ ವಗೈರೆ ಇಟ್ಟುಕೊಂಡಿಲ್ಲ, ಕೇವಲ ಕೂಲಿನಾಲಿ ಮಾಡಿಕೊಂಡು ಇರತಕ್ಕಂಥವರು. ಆದ್ದರಿಂದ ನೀವು ನಿಮ್ಮ ಸಿದ್ಧಾಂತದಂತೆ ಹೋಗಬೇಡಿ, ನೀವು ಮಾಡತಕ್ಕಂಥದ್ದನ್ನು ನಾನು ಒಪ್ಪುತ್ತೇನೆ. ಆದ್ದರಿಂದ ಎಲ್ಲಿ ಅಗತ್ಯವಾದಷ್ಟು ಸೇಂದಿ ಮರಗಳಿವೆ, ಅಷ್ಟಕ್ಕೆ ಸೀಮಿತ ಮಾಡಿದರೆ ಆ ಜನರಿಗೆ ಒಂದು ಸಹಾಯವಾಗುತ್ತದೆ..

ಶ್ರೀ ಜೆ.ಹೆಚ್.ಪಟೇಲ್: ಅಧ್ಯಕ್ಷರೆ, ನಾನು ಎಲ್ಲಾ ಜಿಲ್ಲೆಗಳ ಡೆಪ್ಯೂಟಿ

ಕಮೀಷನರ್‌ರವರಿಂದ ವರದಿ ತರಿಸಿಕೊಂಡು ಅಲ್ಲಿರುವ ಸೇಂದಿವನ ಇವು ಸಾಮಾನ್ಯವಾಗಿ ರೆವಿನ್ಯೂ ಲೆಕ್ಕದಲ್ಲಿ ಇರುತ್ತವೆ, ಈಗ ಆ ವನಗಳು ಏನಾದರೂ ಉಳಿದಿವೆಯೇ? ಮೇಲಾಗಿ ಸೇಂದಿಮರವನ್ನು ಹತ್ತಿ ಕಟ್ಟುವವರೇ ಇಲ್ಲ. ಮೊದಲು ಎಷ್ಟು ವೇಗವಾಗಿ ಮತ್ತು ಎಫಿಷಿಯಂಟ್ ಆಗಿ ಮರ ಹತ್ತಿ ಕಟ್ಟುತ್ತಿದ್ದರು, ಇಳಿಯುತ್ತಿದ್ದರು, ಈಗ ಏನಾಗಿದೆ ಮರ ಹತ್ತಿ ಬೀಳುವವರೇ ಜಾಸ್ತಿ ಜನ ಇದ್ದಾರೆ.

(ಇ) ಬೀಳಗಿ ತಾಲ್ಲೂಕಿನ ಹೇರಕಲ್ ಗ್ರಾಮದಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರಿಗೆ ಆ ಶಾಲೆಯ ಶಿಕ್ಷಕರೊಬ್ಬರು ಅಪಮಾನ ಮಾಡಿರುವುದು.

ಶ್ರೀ ರಾಜಶೇಖರ ಶೀಲವಂತ (ಗುಳೇದ ಗುಡ್ಡ): ಅಧ್ಯಕ್ಷರೆ, ಬೀಳಗಿ ತಾಲ್ಲೂಕಿನ ಹರಕೆರೆ ಗ್ರಾಮದಲ್ಲಿ ತಾಲ್ಲೂಕು ಪಂಚಾಯಿತಿಯ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಮುಗಿಸಿ ಊರಿನ ವಿಷಯಕ್ಕೆ ಸಂಬಂಧಿಸಿದಂತೆ ಊರಿನ ಜನತೆ ಹಾಗೂ ಶಿಕ್ಷಕರು ಚರ್ಚೆ ಮಾಡಿದಾಗ, ಶಾಲೆಯಲ್ಲಿ ಸರಿಯಾದ ವಿದ್ಯಾಭ್ಯಾಸ ನಡೆದಿಲ್ಲ, ಶಾಲೆ ಸರಿಯಾಗಿ ನಡೆಯುತ್ತಿಲ್ಲ ಎನ್ನುವ ಕಾರಣಕ್ಕಾಗಿ ಅಲ್ಲಿಯ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಗ್ರಾಮಸ್ಥರಿಗೆ ಕೂಡ ತೊಂದರೆಯಾಗಿದೆ ಎನ್ನತಕ್ಕಂಥ ವಿಷಯವನ್ನು ಗ್ರಾಮದ ತಾಲ್ಲೂಕು ಪಂಚಾಯಿತಿಯ ಸದಸ್ಯರಾಗಿರುವ ಮಾನ್ಯ ಸಂಗಮೇಶ್ ಭಗವತಿಯವರು ಪ್ರಸ್ತಾಪ ಮಾಡಿದಾಗ, ಆ ಶಾಲೆಯ ಟೀಚರ್ ಆಗಿರುವ ಟಿ.ವೈ.ಜಾನಮಟ್ಟಿಯವರು, ಅವರ ಜೊತೆ ಕೋಪಗೊಂಡು ತುಂಬಾ ಕೆಟ್ಟದಾಗಿ ನಡೆದುಕೊಂಡರು ಹಾಗೂ ಎಲ್ಲಾ ಮಹಾಜನಗಳ ಮುಂದೆ ಅಪಮಾನವನ್ನೂ ಕೂಡ ಮಾಡಿದ್ದಾರೆ. ನಂತರ ಅಲ್ಲಿರುವ ಊರಿನ ಹಿರಿಯರು ಅವರೇ ಕುಳಿತುಕೊಂಡು ಅಪಮಾನಕ್ಕೆ ಒಳಗಾದವರನ್ನು ಸಮಾಧಾನ ಮಾಡುವಂತಹ ಕೆಲಸವನ್ನೂ ಕೂಡ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಆ ಶಿಕ್ಷಕ ತನ್ನ ಹತ್ತಿರ ಒಂದು ಬಂದೂಕು ಕೂಡ ಇಟ್ಟುಕೊಂಡಿದ್ದಾನೆ. ಇಲ್ಲಿ ಒಂದು ವಿಚಿತ್ರವಾದ ಸಂಗತಿ ಏನೆಂದರೆ ಆ ಶಿಕ್ಷಕ ಏಕೆ ಬಂದೂಕು ಇಟ್ಟುಕೊಂಡಿದ್ದಾನೆ ಎಂಬುದು ನಮಗೆ ಗೊತ್ತಿಲ್ಲ. ಆ ಬಂದೂಕನ್ನೇ ಆಧಾರವಾಗಿ ಇಟ್ಟುಕೊಂಡು ತಾಲ್ಲೂಕು ಪಂಚಾಯಿತಿಯ ಸದಸ್ಯರ ಮೇಲೆ ಆಕ್ರಮಣ ಮಾಡುವುದಕ್ಕೆ ಬಂದಾಗ, ಅಲ್ಲಿದ್ದ ಗ್ರಾಮದ ಹಿರಿಯ ಮುಖಂಡರು ಅವರಿಗೆ ಸಮಾಧಾನ ಮಾಡಿ ಹೇಳಿ ಕಳುಹಿಸಿದ್ದಾರೆ. ನಂತರ ಅದೇ ದಿನ ಸಂಜೆ ಸುಮಾರು 5-00 ಗಂಟೆಗೆ ಹೆರಕಲ್ ಗ್ರಾಮದ ಬಳಿಯಿರುವ ಹೆರಕಲ್ ಪುನರ್‌ವಸತಿ ಕೇಂದ್ರಕ್ಕೆ ತನ್ನ ಸಂಬಂಧಿಗಳನ್ನು ಕರೆದುಕೊಂಡು ಹಾಗೂ ತನ್ನ ಹಿಂಬಾಲಕರನ್ನು ತನ್ನದೇ ಆದ ಒಂದು 709ನೇ ನಂಬರಿನ ಟ್ರಕ್‌ನಲ್ಲಿ ಬಂದು, ಜೊತೆಗೆ ತಾನೂ ಕೂಡ ಮೋಟಾರ್ ಸೈಕಲ್‌ನಲ್ಲಿ ಬಂದೂಕನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು, ಮಾರಕ ಅಸ್ತ್ರಗಳನ್ನು ತೆಗೆದುಕೊಂಡು ಬಂದು ಗ್ರಾಮದಲ್ಲಿ ಗಲಾಟೆ ಮಾಡಿದಾಗ, ಇಡೀ ಊರಿನ ಜನತೆ ಎಲ್ಲರೂ ಸಹ ಬಾಗಿಲು ಮುಚ್ಚಿ ಕುಳಿತುಕೊಳ್ಳುವ ಪರಿಸ್ಥಿತಿ ಉಂಟಾಯಿತು. ಇಷ್ಟೆಲ್ಲಾ ಆದರೂ ಕೂಡ ಶಾಲೆಯ ಬಗ್ಗೆ ಮಾತನಾಡುವ ಯಾರಾದರೂ ಗಂಡು ಮಕ್ಕಳಿದ್ದರೆ ಹೊರಗೆ ಬನ್ನಿ,